

# ನಾಸ್ತಿಕ ಹುಡುಗ ಆಸ್ತಿಕ ಹುಡುಗಿ

ತುಳಸಿ ಹಳ್ಳಿ ಹುಡುಗಿ. ಮಹಾನ್ ದೈವಭಕ್ತೆ. ಆಕೆ ಊರ ದೇವತೆ ಪದ್ಮಾವತಿಯನ್ನು ತಲೆತಲಾಂತರಗಳಿಂದ ಪೂಜಿಸ್ತಾ ಬಂದಿರೋ ಕುಟುಂಬಕ್ಕೆ ಸೇರಿದ ಅರ್ಚಕರ ಮಗಳು. ಪದ್ಮಾವತಿಯ ಮೇಲೆ ಅನವರತ ನಂಬಿಕೆ ಇಟ್ಟಿರೋ ಕುಟುಂಬ. ಆ ತಾಯಿಯ ಪೂಜೆ ಬರೀ ವೃತ್ತಿಯಲ್ಲ, ಅವರಿಗದೇ ಜಗತ್ತು, ಅದೇ ಮುಕ್ತಿ. ಊರಲ್ಲಿರೋ ಪದ್ಮಾವತಿ ಎಲ್ಲರಿಗೂ ದೇವತೆಯಾದರೆ ತುಳಸಿಗೆ ಫ್ರೆಂಡ್. ಆಕೆ ಪದ್ಮಾವತಿಯನ್ನು ಪದ್ದು ಎಂದೇ ಕರೆಯೋದು. ತುಳಸಿಗೆ ಮುದ್ದಿನ ತಮ್ಮ ಮತ್ತು ಪ್ರೀತಿಯ ತಂಗಿ ಇದ್ದಾರೆ.

ತುಳಸಿಗೆ ವರ್ಷಗಳಿಂದ ಒಂದು ಕನಸು ಬೀಳುತ್ತಿರುತ್ತೆ. ಆ ಕನಸಿನಲ್ಲಿ ಆಕೆ ನೀರಿನಲ್ಲಿ ಮುಳುಗುತ್ತಿರುತ್ತಾಳೆ. ಇನ್ನೇನು ಮುಳುಗೇ ಹೋದ್ಲು ಅನ್ನುವಾಗ ಕೈಯೊಂದು ಬಂದು ಆಕೆಯನ್ನು ಮೇಲಕ್ಕೆತ್ತುತ್ತದೆ. ಆದ್ರೆ ಆ ಕನಸಿನ ಹುಡುಗನ ಮುಖ ಮಾತ್ರ ತುಳಸಿಗೆ ಕಾಣಿಸೋದಿಲ್ಲ. ಪದ್ಮಾವತಿ ಒಂದಿನ ಆ ಹುಡುಗನ ಮುಖ ತೋರಿಸೇ ತೋರಿಸ್ತಾಳೆ, ತನ್ನದೂ ಅವನದ್ದೂ ಜನುಮಜನುಮದ ಬಂಧ ಅನ್ನೋದು ತುಳಸಿಯ ಬಲವಾದ ನಂಬಿಕೆ.

ಏನೇ ಒಳ್ಳೇ ಕಾರ್ಯ ನಡೀಬೇಕೆಂದ್ರೂ ಪದ್ಮಾವತಿಯ ಬಳಿ ಬಂದು ಪ್ರಶ್ನೆ ಕೇಳೋದು ಊರವರ ವಾಡಿಕೆ. ಪದ್ಮಾವತಿಗೆ ಒಪ್ಪಿಗೆ ಇದ್ರೆ ಆಕೆ ಬಿಳೀ ಹೂ ಕೊಡ್ತಾಳೆ. ಇಲ್ಲ ಅಂದ್ರೆ ಕೆಂಪು ಹೂ ಗ್ಯಾರಂಟಿ. ತುಳಸಿಗೆ ಹಲವಾರು ಸಂಬಂಧಗಳು ಬರ್ತಾ ಇವೆ. ಆದರೆ ಪದ್ಮಾವತಿ ಯಾವುದಕ್ಕೂ ಒಪ್ಪಿಗೆ ಕೊಡ್ತಾ ಇಲ್ಲ. 'ನೀನು ಪದ್ಮಾವತಿಯ ಮಗಳು, ನಿನಗೋಸ್ಕರ ಒಬ್ಬ ರಾಜಕುಮಾರನ್ನೇ ಪದ್ಮಾವತಿ ತರ್ತಾಳೆ' ಅನ್ನೋದು ತುಳಸಿಯ ಅಜ್ಜನ ಬಲವಾದ ನಿಲುವು. ತುಳಸಿಗೆ ಅವರದೇ ಹೆಚ್ಚಿನ ಒಲವು. ಒಟ್ಟಿನಲ್ಲಿ ಸುಖೀ ಮತ್ತು ಸಂತೃಪ್ತ ಕುಟುಂಬ.

ಸಾಮ್ರಾಟ್ ಸಿಟಿ ಹುಡುಗ. ಸೂಪರ್‌ಸ್ಟಾರ್. ಸಿನಿಮಾದಲ್ಲಿ ಜನಪ್ರಿಯ ನಟ. ಆದರೆ ದೇವರು ಅಂದ್ರೆ ಇವನಿಗಾಗಲ್ಲ. ತನ್ನ ಯಶಸ್ಸು ಏನೇ ಇದ್ರೂ ತನ್ನ ಸ್ವಂತ ಪರಿಶ್ರಮದಿಂದ ಗಳಿಸಿರೋದು. ಇದಕ್ಕೆ ದೇವರಿಗೆ ಯಾಕೆ ಕ್ರೆಡಿಟ್ ಕೊಡಬೇಕು ಎಂಬ ವ್ಯಕ್ತಿ. ಆದರೆ ಅವನ ಅಮ್ಮ, ಅಕ್ಕ ದೈವಭಕ್ತರು. ಸಾಮ್ರಾಟನ ಈ ಸ್ವಭಾವದ ಬಗ್ಗೆ ಅವರಿಗೆ ಬೇಜಾರಿದೆ. ಆದರೆ ಅವರ ಮಾತನ್ನು ಕೇಳೋ ಪರಿಸ್ಥಿತಿಯಲ್ಲಿ ಸಾಮ್ರಾಟ್ ಇಲ್ಲ. ಈ ಮಧ್ಯೆ, ಸಾಮ್ರಾಟ್‌ನ ದೇವರ ಮೇಲಿನ ಕೋಪದಿಂದಾಗಿ, ಪಂಡಿತರ ಕೋಪ ಎದುರಿಸೋ ಒಂದು ಅನಿವಾರ್ಯ ಪರಿಸ್ಥಿತಿ ಅಮ್ಮ ವಸುಂಧರಾಗೆ ಬರುತ್ತೆ. ಈ ಸಂದರ್ಭದಲ್ಲಿ ಕ್ಷಮೆ ಕೇಳೋ ವಸಂಧರಾಗೆ ಪಂಡಿತರು ಒಂದು ಹಿಂಟ್ ಕೊಡ್ತಾರೆ. ಒಬ್ಬ ಪುರುಷನ ಜೀವನದಲ್ಲಿ ಶಾಂತಿ, ನೆಮ್ಮದಿ ಬರ್ಬೇಕು ಅಂದ್ರೆ ಅಹಂಕಾರ ಬಿಟ್ಟು ದೈವಕ್ಕೆ ತನ್ನನ್ನು ಒಪ್ಪಿಸ್ಕೊಳ್ಳೋದು ಮುಖ್ಯ. ಆತನ ಮೇಲೆ ಇಂಥ ವಿಷಯದಲ್ಲಿ ಪ್ರಭಾವ ಬೀರಲು ಒಂದು ಹುಡುಗಿಯಿಂದ ಮಾತ್ರ ಸಾಧ್ಯ ಅನ್ನೋದನ್ನ ಸೂಚ್ಯವಾಗಿ ಹೇಳ್ತಾರೆ. ಅವಳು ಯಾರು? ಈ ಮಧ್ಯೆ ಸಾಮ್ರಾಟನಿಗೊಬ್ಬಳು ಗರ್ಲ್‌ಫ್ರೆಂಡ್ ಕೂಡಾ ಇದ್ದಾಳೆ. ವಿರುದ್ಧ ಧ್ರುವಗಳಂತಿರುವ ತುಳಸಿ ಮತ್ತು ಸಾಮ್ರಾಟ ಭೇಟಿಯಾಗ್ತಾರಾ? ಅವರಿಬ್ಬರ ಜೀವನ ಹೇಗೆ ಮುಂದುವರಿಯುತ್ತದೆ? ಇವರ ಜೀವನದಲ್ಲಿ ದೇವಿ ಪದ್ಮಾವತಿಯ ಪಾತ್ರವೇನು?

ಹಲವಾರು ಸದಭಿರುಚಿಯ ಧಾರಾವಾಹಿಗಳನ್ನು ಕನ್ನಡ ಟೆಲಿವಿಷನ್ ವೀಕ್ಷಕರಿಗೆ ನೀಡಿದ ಕಲರ್ಸ್ ಕನ್ನಡದ ಹೊಸ ಕತೆ ಇದು. ತುಳಸಿಯಾಗಿ ಅಂದದ ಹುಡುಗಿ ದೀಪ್ತಿ ಹಾಗೂ ಸಾಮ್ರಾಟನಾಗಿ ಟಫ್ ಹುಡುಗ ತ್ರಿವಿಕ್ರಮ್ ಅಭಿನಯಿಸುತ್ತಿದ್ದಾರೆ. ಈ ಧಾರಾವಾಹಿಯನ್ನು ಟೆಲಿವಿಷನ್ ಜಗತ್ತಿನಲ್ಲಿ ಸಾಕಷ್ಟು ಅನುಭವ ಪಡೆದಿರುವ ನಿರ್ಮಲಾ ಅವರು ನಿರ್ಮಿಸಿ ನಿರ್ದೇಶಿಸುತ್ತಿದ್ದಾರೆ. ಇವರ ಸಾಯಿನಿರ್ಮಲಾ ಪ್ರೊಡಕ್ಷನ್ 'ಪದ್ಮಾವತಿ'ಯ ನಿರ್ಮಾಣದ ಹೊಣೆ ಹೊತ್ತಿದೆ. ಈ ಧಾರಾವಾಹಿ ಫೆಬ್ರವರಿ 6 ರಿಂದ ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9.30ಕ್ಕೆ ಪ್ರಸಾರವಾಗುತ್ತಿದೆ.